**ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಾವೇರಿ.**

**ಸಿ.ಸಿ.ನಂ.40/2017**

| | | | |
|---|---|---|---|
| ಸಾಕ್ಷಿದಾರರ ಹೆಸರು | ಹನುಮಂತಪ್ಪ ಅರಳಿಕಟ್ಟಿ | ಸಿಡಬ್ಲ್ಯೂ | 10 |
| ತಂದೆಯ ಹೆಸರು | ತಿಮ್ಮಪ್ಪ | ಪಿಡಬ್ಲ್ಯೂ | 5 |
| ವಯಸ್ಸು | 70 ವರ್ಷ | | |
| ಉದ್ಯೋಗ | ನಿವೃತ್ತ ಪಿ.ಎಸ್.ಐ | | |
| ವಾಸಸ್ಥಳ | ರಾಣೇಬೆನ್ನೂರ | | |

**ದಿಃ06.03.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಸಾಕ್ಷಿದಾರರ ಮುಖ್ಯ ವಿಚಾರಣೆಃ**

1) ನಾನು ದಿನಾಂಕಃ 29.09.2015 ರಿಂದ ದಿನಾಂಕಃ 30.06.2016 ರವರೆಗೆ ಹಾವೇರಿ ಶಹರ ಪೊಲೀಸ ಠಾಣೆಯಲ್ಲಿ ಪಿ.ಎಸ್.ಐ ಅಪರಾಧ ವಿಭಾಗದಲ್ಲಿ ಕಾರ್ಯ ನಿರ್ವಹಿಸಿದ್ದೇನೆ. ದಿನಾಂಕಃ 27.02.2016 ರಂದು ಸಾಯಂಕಾಲ 6-30 ಘಂಟೆ ಸಮಯದಲ್ಲಿ ಠಾಣಾ ಪ್ರಭಾರದಲ್ಲಿದ್ದಾಗ ನ್ಯಾಯಾಲಯಕ್ಕೆ ಬರುವ ನಮ್ಮ ಠಾಣೆಯ ಸಹ ಸಿಬ್ಬಂದಿಯು ನ್ಯಾಯಾಲಯದಿಂದ ಕಳುಹಿಸಿ ಕೊಟ್ಟ ಖಾಸಗಿ ದೂರನ್ನು ಸ್ವೀಕರಿಸಿ ಸದರಿ ದೂರಿನ ಆಧಾರದ ಮೇಲೆ ಪ್ರ.ವ.ವರದಿ ತಯಾರಿಸಿ ಮೇಲಾಧಿಕಾರಿಗಳಿಗೆ ಮತ್ತು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ. ನಂತರ ದಿನಾಂಕಃ 29.02.2016 ರಂದು ತನಿಖೆಯನ್ನು ಮುಂದುವರೆಯಿಸಿಘಟನಾ ಸ್ಥಳವಾದ ಹಾವೇರಿಯ ತಹಶೀಲ್ದಾರ ಕಛೇರಿಗೆ ಬೇಟಿಕೊಟ್ಟು ಚಾ.ಸಾ-1 ಇವರು ತೋರಿಸಿದ ಸ್ಥಳವನ್ನು ಪರೀಶಿಲನೆ ಮಾಡಿ ಚಾ.ಸಾ-2 ಮತ್ತು 3 ಇವರ ಸಮಕ್ಷಮ ಬೆಳಗಿನ 11-15 ಘಂಟೆಯಿಂದ 11-

45 ರವರೆಗೆ ಘಟನಾ ಸ್ಥಳದ ಪಂಚನಾಮೆಯನ್ನು ಮಾಡಿದ್ದೇನೆ ಹಾಗೂ ಘಟನಾ ಸ್ಥಳದ ಪಂಚನಾಮೆಯನ್ನು ಮಾಡುವಾಗ ಒಂದು ಪೋಟೋ ಸಹ ತೆಗೆದಿದ್ದೇನೆ.

2) ದಿನಾಂಕಃ 01.03.2016 ರಂದು ತನಿಖೆಯನ್ನು ಮುಂದುವರೆಯಿಸಿ ಈ ಪ್ರಕರಣದಲ್ಲಿ ಹಾವೇರಿಯ ತಹಶೀಲ್ದಾರ ಇವರಿಗೆ ಈ ಪ್ರಕರಣಕ್ಕೆ ಸಂಬಂದಪಟ್ಟಂತಹ ಭಕ್ಷೀಸ ಪತ್ರದ ಮೂಲ ಪ್ರತಿಯನ್ನು ಹಾಜರುಪಡಿಸಲು ನಾನು ಮನವಿ ಪತ್ರವನ್ನು ಸಲ್ಲಿಸಿದ್ದೇನೆ. ದಿನಾಂಕಃ 09.03.2016 ರಂದು ಪಿರ್ಯಾದಿಗೆ ಮತ್ತು ಸಾಕ್ಷಿದಾರರಿಗೆ ಹಾಗೂ ಆರೋಪಿತರಿಗೆ ಠಾಣೆಗೆ ಹಾಜರಾಗುವಂತೆ ನೋಟಿಸ ಜಾರಿ ಮಾಡಿದ್ದೇನೆ. ದಿನಾಂಕಃ 11.03.2016 ರಂದು ತನಿಖೆಯನ್ನು ಮುಂದುವರೆಯಿಸಿ ಚಾ.ಸಾ-5 ರಿಂದ 9 ಇವರ ಹೇಳಿಕೆಗಳನ್ನು ಪಡೆದುಕೊಂಡಿದ್ದೇನೆ. ನಂತರ ಈ ಪ್ರಕರಣದಲ್ಲಿ ಸಾಕ್ಷಿದಾರರಾದಂತಹ ಚಾ.ಸಾ-6 ಇವರ ಮಾದರಿ ಸಹಿಗಳನ್ನು ಪಡೆದುಕೊಂಡಿದ್ದೇನೆ. ಅಲ್ಲದೇ ಇಬ್ಬರೂ ಆರೋಪಿಗಳ ಮಾದರಿ ಸಹಿಗಳನ್ನು ಚಾ.ಸಾ-2 ಮತ್ತು 4 ನೇದವರಾದ ಪಂಚರ ಸಮಕ್ಷಮ ಪಡೆದಿದ್ದೇನೆ. ಸದರಿ ಸಹಿಗಳನ್ನು ಬೆಳಗಿನ 11-00 ಘಂಟೆಯಿಂದ ಮದ್ಯಾಹ್ನ 1-00 ಘಂಟೆಯವರೆಗೆ ಪಡೆದಿದ್ದೇನೆ.

3) ದಿನಾಂಕಃ 17.03.2016 ರಂದು ತನಿಖೆಯನ್ನು ಮುಂದುವರೆಯಿಸಿ ಹಾವೇರಿ ತಹಶೀಲ್ದಾರ ಕಚೇರಿಗೆ ಬೇಟಿಕೊಟ್ಟು ಈ ಪ್ರಕರಣದಲ್ಲಿ ಭಕ್ಷೀಸ ಪತ್ರದ ಮೂಲಪ್ರತಿ ಹಾಜರುಪಡಿಸಲು ನೋಟಿಸ ಕೊಟ್ಟಿದ್ದೇನೆ. ದಿನಾಂಕಃ 06.04.2016 ರಂದು ಈ ಪ್ರಕರಣದಲ್ಲಿ ತನಿಖೆಯನ್ನು ಮುಂದುವರೆಯಿಸಿ ಹಾವೇರಿಯ ತಹಶೀಲ್ದಾರ ಕಛೇರಿಯಿಂದ ಒಂದು ದಾಖಲಾತಿಯನ್ನು ಸ್ವೀಕರಿಸಿ ಅದನ್ನು ಕಡತಕ್ಕೆ ಅಳವಡಿಸಿಕೊಂಡಿದ್ದೇನೆ. ದಿನಾಂಕಃ 12.04.2016 ರಂದು ಇಬ್ಬರೂ ಆರೋಪಿಗಳನ್ನು ಹಾಜರುಪಡಿಸಿಕೊಂಡು ಭಕ್ಷೀಸ ಪತ್ರದ ಮೂಲ ಪ್ರತಿಯ ಬಗ್ಗೆ ವಿಚಾರಣೆ ಮಾಡಿದಾಗ ಸದರಿ ಭಕ್ಷೀಸ ಪತ್ರದ ಮೂಲ ಪ್ರತಿಯು ನ್ಯಾಯಾಲಯದಲ್ಲಿ ತನಿಖೆಗೆ ಬಾಕಿ ಇರುವ ಸಿವಿಲ್ ಪ್ರಕರಣವಾದ ಒ.ಎಸ್ ನಂಬರಃ 59/2015 ರಲ್ಲಿ ಹಾಜರುಪಡಿಸಲಾಗಿದೆ ಎಂದು ತಿಳಿಸಿರುತ್ತಾರೆ.

4) ದಿನಾಂಕಃ 12.04.2016 ಮತ್ತು 17.05.2016 ರಂದು ನಾನು ನ್ಯಾಯಾಲಯಕ್ಕೆ ಮೂಲ ಭಕ್ಷೀಸ ಪತ್ರವನ್ನು ಠಾಣೆಗೆ ಹಾಜರುಪಡಿಸಲು ಮನವಿ ಪತ್ರವನ್ನು ಇದೇ ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ. ನಂತರ ಈ ಪ್ರಕರಣದ ಮುಂದಿನ ತನಿಖೆಯನ್ನು ಚಾ.ಸಾ-11 ಇವರಿಗೆ ವಹಿಸಿಕೊಟ್ಟಿದ್ದೇನೆ.

5) ನಾನು ಈ ಪ್ರಕರಣದಲ್ಲಿ ಸ್ವೀಕರಿಸಿದ ಖಾಸಗಿ ಪಿರ್ಯಾದಿ ನೋಡಿದರೆ ಗುರುತಿಸಬಲ್ಲೆ. ಅದರ ಮೂಲ ಪ್ರತಿಯನ್ನು ಈಗಾಗಲೇ ನಿ.ಪಿ-1 ಎಂದು ಗುರುತಿಸಲಾಗಿರುತ್ತದೆ. ಪ್ರ.ವ.ವರದಿಯನ್ನು ನಿ.ಪಿ-6 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-6(ಎ) ಎಂದು ಗುರುತಿಸಲಾಯಿತು. ಘಟನಾ ಸ್ಥಳದ ಪಂಚನಾಮೆಯನ್ನು ಈಗಾಗಲೇ ನಿ.ಪಿ-3 ಎಂದು ಗುರುತಿಸಲಾಗಿರುತ್ತದೆ, ಸಾಕ್ಷಿಯ ಸಹಿಯನ್ನು ನಿ.ಪಿ-3(ಬಿ) ಎಂದು ಗುರುತಿಸಲಾಯಿತು. ಸದರಿ ಘಟನಾ ಸ್ಥಳದ ಪಂಚನಾಮೆಯನ್ನು ಮಾಡುವ ಕಾಲಕ್ಕೆ ತೆಗೆದಂತಹ ಪೋಟೋ ಈಗಾಗಲೇ ನಿ.ಪಿ-2 ಎಂದು ಗುರುತಿಸಲಾಗಿರುತ್ತದೆ. ಜಪ್ತು ಪಂಚನಾಮೆಯನ್ನು ಈಗಾಗಲೇ ನಿ.ಪಿ-4 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ-4(ಬಿ) ಎಂದು ಗುರುತಿಸಲಾಯಿತು. ಹಾವೇರಿಯ ತಹಶೀಲ್ದಾರ ಕಛೇರಿಗೆ ಹಾಜರುಪಡಿಸಿದ ಒಂದು ಮನವಿ ಪತ್ರವನ್ನು ನಿ.ಪಿ-7 ಎಂದು , ಸಾಕ್ಷಿಯ ಸಹಿಯನ್ನು ನಿ.ಪಿ-7(ಎ) ಎಂದು ಗುರುತಿಸಲಾಯಿತು. ತಹಶೀಲ್ದಾರ ಕಛೇರಿ ಹಾವೇರಿ ಇವರು ಕೊಟ್ಟಂತಹ ಹಿಂಬರಹವನ್ನು ನಿ.ಪಿ-8 ಎಂದು ಗುರುತಿಸಲಾಯಿತು. ಅದೇ ರೀತಿ ಆರೋಪಿಗಳಿಗೆ ಮತ್ತು ಸಾಕ್ಷಿದಾರರಿಗೆ ಕೊಟ್ಟಂತಹ ನೋಟಿಸನ್ನು ನಿ.ಪಿ-9 ರಿಂದ ನಿ.ಪಿ-11 ಎಂದು ಗುರುತಿಸಲಾಯಿತು. ಮೂಲ ದಾನ ಪತ್ರವನ್ನು ಹಾಜರುಪಡಿಸಲು ನಾನು ನ್ಯಾಯಾಲಯಕ್ಕೆ ಸಲ್ಲಿಸಿದ ಎರಡು ಮನವಿ ಪತ್ರಗಳನ್ನು ನಿ.ಪಿ-12 ಮತ್ತು ನಿ.ಪಿ-13 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಗಳನ್ನು ನಿ.ಪಿ-12(ಎ) ಮತ್ತು ನಿ.ಪಿ-13(ಎ) ಎಂದು ಗುರುತಿಸಲಾಯಿತು. ಆರೋಪಿಗಳನ್ನು ನೋಡಿದರೆ

ಗುರುತಿಸಬಲ್ಲೆ. ನ್ಯಾಯಾಲಯದ ಮುಂದೆ ಇರುವ ಇಬ್ಬರೂ ಆರೋಪಿಗಳು ನಾನು ಪೊಲೀಸ ಠಾಣೆಗೆ ಕರೆಯಿಸಿಕೊಂಡ ವ್ಯಕ್ತಿಗಳಾಗಿರುತ್ತಾರೆ.

**ಪಾಟೀ ಸವಾಲು: ಶ್ರೀ.ಎಸ್.ಕೆ.ವಾಯ್ ವಕೀಲರಿಂದ: ಆರೋಪಿತರ ಪರವಾಗಿ:**

6) ಖಾಸಗಿ ಪಿರ್ಯಾದಿಯಲ್ಲಿ ಕಾಣಿಸಿದಂತಹ ಸಾಕ್ಷಿದಾರರ ಹೇಳಿಕೆಗಳನ್ನು ನಾನು ಪಡೆದುಕೊಂಡಿರುವದಿಲ್ಲ. ಅದೇ ರೀತಿ ನಾನು ಘಟನಾ ಸ್ಥಳದ ಪಂಚನಾಮೆಯಾಗಲಿ ಮತ್ತು ಜಪ್ತು ಪಂಚನಾಮೆಯಾಗಲಿ ಮಾಡಿಲ್ಲ ಅಂದರೆ ಸರಿಯಲ್ಲ ಮತ್ತು ಯಾವುದೇ ಪೋಟೋ ತೆಗೆದಿಲ್ಲ ಅಂದರೆ ಸರಿಯಲ್ಲ ಮತ್ತು ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡಿಲ್ಲ ಅಂದರೆ ಸರಿಯಲ್ಲ. ನಾನು ಈ ಪ್ರಕರಣದಲ್ಲಿ ಯಾವುದೇ ದಾಖಲಾತಿಗಳನ್ನು ಸರಿಯಾಗಿ ಪಡೆಯದೇ ಇದ್ದುದರಿಂದ ಆರೋಪಿಗಳ ವಿರುದ್ಧ ಸರಿಯಾಗಿ ತನಿಖೆ ಮಾಡದೇ ಆರೋಪಿಗಳ ವಿರುದ್ಧ ಸುಳ್ಳು ದಾಖಲೆ ಪಡೆದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ. ಆರೋಪಿಗಳ ಇಬ್ಬರ ವಿರುದ್ಧ ಯಾವುದೇ ಸಾಕ್ಷ್ಯಗಳು ಕಂಡು ಬರದೇ ಇದ್ದರೂ ಸಹ ಆರೋಪಿತರ ವಿರುದ್ಧ ಸುಳುಳ ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೇ. ಸರಿ ಇದೆ.
ಎಂದು ಒಪ್ಪಿರುತ್ತಾರೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು
ಹಾವೇರಿ.